Form No.4 (Civil)
Deposition
Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 38/2018

ಪ್ರಾ.ಸಾ 13 ಚಾ.ಸಾ 21

| | | |
|---|---|---|
| ಹೆಸರು | : | ಶಿವಾನಂದ ವಾಲಿಕಾರ |
| ತಂದೆಯ ಹೆಸರು | : | ಶ್ರಿಮಂತ ವಾಲಿಕಾರ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಪಿ.ಐ ಕಲಬುರಗಿ ನಗರ  ಟ್ರಾಫಿಕ ಪೊಲೀಸ ಠಾಣೆ |
| ವಾಸ | : | ಕಲಬುರಗಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 24-04-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನಾನು ದಿಃ 28.06.2015 ರಿಂದ 13.05.2018 ರವರೆಗೆ ನಾನು ಗುರುಮಠಕಲ ವೃತ್ತ ನಿರೀಕ್ಷಕನಾಗಿ ಕರ್ತವ್ಯನಿರ್ವಹಿಸಿರುತ್ತೇನೆ.

2. ದಿಃ 15.02.2018 ರಂದು ಈ ಪ್ರಕರಣದ ಕಡತವನ್ನು ಚಾಸಾ-20 ರವರಿಂದ ಮುಂದಿನ ತನಿಖೆಗಾಗಿ ಪಡೆದುಕೊಂಡಿರುತ್ತೇನೆ. ತನಿಖೆ ಮುಂದುವರೆಸಿರುತ್ತೇನೆ. ಸಿಬ್ಬಂದಿ ಸಹಾಯದಿಂದ ಚಾಸಾ-3 ಮತ್ತು 4 ರವರ ಸಮಕ್ಷಮ ಸೈದಾಪೂರ ಸರಕಾರಿ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ ಮೃತ ತಿಮ್ಮಪ್ಪನ ಶವಪಂಚನಾಮೆಯನ್ನು ನೇರವೇರಿಸಿರುತ್ತೇನೆ. ಶಪಂಚನಾಮೆಯನ್ನು ಈಗಾಗಲೇ ನಿ.ಪಿ.7 ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು **ನಿ.ಪಿ.7(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಟ್ಟು 4 ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಅವುಗಳನ್ನು ಈಗಾಗಲೇ ನಿ.ಪಿ.8 ರಿಂದ 11 ಎಂದು ಗುರುತಿಸಲಾಗಿದೆ. ಚಾಸಾ-5 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಆರೋಪಿತರ ಪತ್ತೆ ಕುರಿತು ನಾನು ಸಿಬ್ಬಂದಿಯ ಸಹಾಯದಿಂದ ನಾಗಲಪೂರದ ಆರೋಪಿತರ

ಮನೆಗೆ ಹೋಗಿರುತ್ತೇನೆ. ಅವರನ್ನು ಮಧ್ಯಾಹ್ನ 3.00 ಗಂಟೆಗೆ ಆರೋಪಿತರನ್ನು ಹಿಡಿದುಕೊಂಡು ಠಾಣೆಗೆ ಬಂದು ವಿಚಾರಣೆ ಮಾಡಿ ತಪ್ಪು ಒಪ್ಪಿಕೊಂಡಿರುತ್ತಾರೆ. ಅವರನ್ನು ದಸ್ತಗಿರಿ ಮಾಡಿರುತ್ತೇನೆ. ಆರೋಪಿತರನ್ನು ಮಾನ್ಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತೇನೆ.

3. ಗುನ್ನೆ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ-3 ಮತ್ತು 4 ರವರ ಸಮಕ್ಷಮ ಚಾಸಾ-1 ಇವರು ತೋರಿಸಿದ ಗುನ್ನೆ ಸ್ಥಳದಲ್ಲಿ ಸಾಯಂಕಾಲ 6.00-6.45 ರವರೆಗೆ ಪಂಚನಾಮೆ ಜರುಗಿಸಿರುತ್ತೇನೆ. ಸ್ಥಳದಲ್ಲಿ ಕರಡು ನಕಾಶೆಯನ್ನು ತಯಾರಿಸಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು ಸಾಕ್ಷಿದಾರರ ಸಹಿಯನ್ನು **ನಿ.ಪಿ.2(ಬಿ)** ಎಂದು ಗುರುತಿಸಲಾಯಿತು. ಕರಡು ನಕಾಶೆಯನ್ನು ಈಗ ತೋರಿಸಲಾಗಿದ್ದು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.17** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.17(ಎ)** ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಒಟ್ಟು ನಾಲ್ಕು ಭಾವತಚಿತ್ರಗಳನ್ನುತ ೆಗೆದಿದ್ದು ಅವುಗಳನ್ನು ಈಗಾಗಲೇ ನಿ.ಪಿ.3 ರಿಂದ 6 ಎಂದು ಗುರುತಿಸಲಾಗಿದೆ. ನಂತರ ಚಾಸಾ-19 ರವರಿಗೆ ಗುನ್ನೆ ಸ್ಥಳದ ನಕಾಶೆಯನ್ನು ತಯಾರಿಸಿ ಕೊಡುವಂತೆ ಕೋರಿಕೊಂಡಿರುತ್ತೇನೆ.

4. ದಿಃ 19.02.2018 ರಂದು ಬಳಿಚಕ್ರ ಗ್ರಾಮಕ್ಕೆ ಭೇಟಿ ನೀಡಿ ಚಾಸಾ-6 ರಿಂದ 11 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ.

5. ದಿಃ 21.02.2018 ರಂದು ಬಳಿಚಕ್ರ ಗ್ರಾಮಕ್ಕೆ ಬೇಟಿ ನೀಡಿ ಚಾಸಾ-12 ರಿಂದ 14 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾಸಾ-1 ರವರ ಪುರವಣಿ ಹೇಳಿಕೆ ಪಡೆದುಕೊಂಡಿರುತ್ತೇನೆ.

6. ದಿಃ 16.03.2018 ರಂದು ಘಟನಾ ಸ್ಥಳದಲ್ಲಿ ವಿದ್ಯುತ ಸಂಪರ್ಕ ಇತ್ತು ಇಲ್ಲವೋ ಎಂದು ತಿಳಿದುಕೊಳ್ಳಲು ಚಾಸಾ-18 ರವರಿಗೆ ಕೋರಿಕೊಂಡಿರುತ್ತೇನೆ.

7. ಚಾಸಾ-17 ರವರಿಗೆ ಗಾಯಾಳುವಿನ ಎಮ್.ಎಲ್.ಸಿ ಹಾಗೂ ಚಿಕಿತ್ಸಾ ವರದಿಯನ್ನು ಹಾಗೂ ಶವಪರೀಕ್ಷಾ ವರದಿಯನ್ನು ನೀಡುವಂತೆ ಕೋರಿಕೊಂಡಿರುತ್ತೇನೆ. ಆಪಾದಿತರ ಇಬ್ಬರ ಟೇಲಿಫೋನ ಸಂಭಾಷಣೆಯನ್ನು ವರದಿಯನ್ನು (ಸಿ.ಡಿ.ಆರ್) ನೀಡುವಂತೆ ಎಸ್,ಪಿ ರವರಿಗೆ ನಾನು ಇ-ಮೇಲ್ ಮೂಲಕ ಕೋರಿಕೊಂಡಿರುತ್ತೇನೆ.

8. ದಿಃ 04.04.2018 ರಂದು ಸದರಿ ಆಪಾದಿತರ ಸಿ.ಡಿ.ಆರ್ ಮತ್ತು ಎಸ್.ಡಿ.ಆರ್ ರನ್ನು ಎಸ್.ಪಿ ಕಛೇರಿಯಿಂದ ಪಡೆದುಕೊಂಡಿರುತ್ತೇನೆ. ಅವುಗಳನ್ನು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.18** ಎಂದು ಗುರುತಿಸಲಾಯಿತು. ನಿ.ಪಿ.18 ಅನ್ನು ಪರೀಶಿಲಿಸಲಾಗಿ ಇದೇ ಆರೋಪಿತರು ಗುನ್ನೆ ಸ್ಥಳದಲ್ಲಿ ಟವರ್ ಲೋಕೇಶನ ಅಡಿಯಲ್ಲಿ ಇರುವುದು ಕಂಡು ಬಂದಿರುತ್ತದೆ. ಮೃತನ ಪಿ.ಎಮ್ ವರದಿಯನ್ನು ಸೈದಾಪೂರ ಸರಕಾರಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.13 ಎಂದು ಗುರುತಿಸಿದ್ದು ಸಾಕ್ಷಿದಾರರ ಸಹಿಯನ್ನು **ನಿ.ಪಿ.13(ಬಿ)** ಎಂದು ಗುರುತಿಸಲಾಯಿತು.

9. ದಿಃ 23.04.2018 ರಂದು ಚಾಸಾ-18 ರವರಿಂದ ನಿ.ಪಿ.14 ರಂತೆ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿ.ಪಿ.14 ಎಂದು ಗುರುತಿಸಿದ್ದು ಸಾಕ್ಷಿದಾರರ ಸಹಿಯನ್ನು **ನಿ.ಪಿ.14(ಬಿ)** ಎಂದು ಗುರುತಿಸಲಾಯಿತು. ಚಾಸಾ-19 ರವರಿಂದ ಗುನ್ನೆ ಸ್ಥಳದ ನಕಾಶೆಯನ್ನು ಪಡೆದುಕೊಂಡಿರುತ್ತೇನೆ ಅದನ್ನು ಈಗಾಗಲೇ ನಿ.ಪಿ.15 ಎಂದು ಗುರುತಿಸಿದ್ದು ಸಾಕ್ಷಿದಾರರ ಸಹಿಯನ್ನು **ನಿ.ಪಿ.15(ಬಿ)** ಎಂದು ಗುರುತಿಸಲಾಯಿತು. ಸೈದಾಪೂರ ಸರಕಾರಿ ಆಸ್ಪತ್ರೆಯಿಂದ ಮೃತನು ಚಿಕಿತ್ಸೆ ಪಡೆದುಕೊಂಡಂತಹ ಚಿಕಿತ್ಸಾ ವರದಿಯನ್ನು ಪಡೆದುಕೊಂಡಿರುತ್ತೇನೆ ಅದನ್ನು ನೋಡಿ ಗುರುತಸಿದ್ದು ಅದನ್ನು **ನಿ.ಪಿ.19** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.19(ಎ)** ಎಂದು

ಗುರುತಿಸಲಾಯಿತು. ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ-15 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ತನಿಖೆ ಪೂರ್ಣಗೊಳಿಸಿ ಆರೋಪಿತನ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 2 ನೇ ಆರೋಪಿತನನ್ನು ನೋಡಿ ಗುರುತಿಸಿದು. 1 ನೇ ಆರೂಪಿ ಗೈರು ಹಾಜರು ಇದ್ದು ವಿನಾಹಿತಿ ಅರ್ಜಿ ಸಲ್ಲಿಸಿದ್ದು ಗುರುತಿಸಲು ತಕರಾರು ವ್ಯಕ್ತಪಡಿಸಿರುವುದಿಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ಜಿ.ಬಿ.ಆರ್. ವಕೀಲರಿಂದ</u>

10. ದಿಃ 14.02.2018 ರಂದು ದೂರು ಸ್ವೀಕರಿಸಿದ್ದು, ದಿಃ 12.02.2018 ರಂದು ಘಟನೆ ನಡೆದಿರುತ್ತದೆ. ಯಾದಗಿರಿ-ರಾಯಚೂರು ಎನ್.ಹೆಚ್. 150 ರ ಬಳಿಚಕ್ರ ಬರುತ್ತದೆ. ಮುಖ್ಯ ರಸ್ತೆಯಿಂದ ಬಳಿಚಕ್ರ ಊರಿನ ಒಳಗಡೆ ಸಿಸಿ ರಸ್ತೆ ಇರುತ್ತದೆ ಎನ್ನುವುದಕ್ಕೆ ಸಾಕ್ಷಿದಾರರು ಡಾಂಬರ ರಸ್ತೆ ಇರುತ್ತದೆ ಮತ್ತು ಊರಿನ ಒಳಗಡೆ ಸಿಸಿ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಊರಿನಲ್ಲಿ ಇರುವಂತಹ ಡ್ರೈನೇಜಗೆ ಮೋರಿ ಕಟ್ಟಿರುತ್ತಾರೆ ಎನ್ನುವುದಕ್ಕೆ ಸಾಕ್ಷಿದಾರರು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಮುಖ್ಯ ರಸ್ತೆಯಿಂದ ಸುಮಾರು 1 ಕಿ.ಮೀಟರ ಒಳಗಡೆ ಕೃತ್ಯ ನಡೆದ ಸ್ಥಳ ಇರುತ್ತದೆ ಎನ್ನುವುದಕ್ಕೆ ಸಾಕ್ಷಿದಾರರು ಸುಮಾರು ಅರ್ಧ ಕಿ.ಮೀಟರ ಇರುತ್ತದೆ ಎಂದು ನುಡಿಯುತ್ತಾರೆ. ಕೃತ್ಯ ನಡೆದ ಸ್ಥಳದ ಹತ್ತಿರ ಮೂರು ರಸ್ತೆಗಳು ಡಿವೇಡ ಆಗುತ್ತವೆ ಎನ್ನುವುದಕ್ಕೆ ಸಾಕ್ಷಿದಾರರು ಒಂದೇ ರಸ್ತೆ ರೋಡ ಇರುತ್ತದೆ ಎಂದು ನುಡಿಯುತ್ತಾರೆ. ರಸ್ತೆಯ ಉತ್ತರ ದಿಕ್ಕಿನಲ್ಲಿ ಬಸವರಾಜ ಎನ್ನುವವರ ಅಂಗಡಿ ಇರುತ್ತದೆ ಎಂದರೆ ಸರಿ. ಪಂಚರನ್ನು ನಮ್ಮ ಸಿಬ್ಬಂದಿಯವರ ಸಹಾಯದಿಂದ ಕರೆಯಿಸಿರುತ್ತೇನೆ. ಚಾಸಾ-3 ಮತ್ತು 4 ರವರು ಫಿರ್ಯಾದಿದಾರರ ಸಂಬಂಧಿಕರು ಆಗಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.17 ರಲ್ಲಿ ಯಾವುದೇ ವಿದ್ಯುತ ಕಂಬ ಇರುವುದಿಲ್ಲ ಎಂದರೆ ಸರಿ. ಬಸವರಾಜ ಇವರ ಅಂಗಡಿ ಡಬ್ಬಕ್ಕೆ ಹೊಂದಿಕೊಂಡಂತೆ ಡ್ರೈನೇಜ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಸಿಸಿ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಈ ಡ್ರೈನೇಜ ಇದ್ದರು ಇಲ್ಲವೆಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಅಂಗಡಿ ರಸ್ತೆಗಿಂತ ಎತ್ತರದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಅಂಗಡಿಯಲ್ಲಿ ಏನಾದರೂ ಸಾಮಾನು ತೆಗೆದುಕೊಂಡು ಸ್ವಲ್ಪ ಹಿಂದಕ್ಕೆ ಸರಿದರೆ ಆ ಡ್ರೈನೇಜನಲ್ಲಿ ಬಿಳುತ್ತಾರೆ ಎಂದರೆ ನನಗೆ ಹೇಳಲು ಸಾಧ್ಯವಿಲ್ಲ.

11. ಸಾಕ್ಷಿ ಹೇಳುವ ಕಾಲಕ್ಕೆ ಪೋನಿನಲ್ಲಿ ಮಾತಾನಾಡುತ್ತಿದ್ದು ಈಗಾಗಲೇ ಇವರಿಗೆ ಆದೇಶ ನಿರ್ದಶಿದಂತೆ ಸಹ ಪುನಃ ಮಧ್ಯಾಹ್ನ 2.20 ಗಂಟೆಗೆ ಮೇಲಾಧಿಕಾರಿಗಳೊಂದಿಗೆ ಪೋನಿನಲ್ಲಿ ಮಾತಾನಾಡುತ್ತಿದ್ದರಿಂದ ವಿ.ಸಿ ಯಲ್ಲಿ ಸಾಕ್ಷಿ ಪಡೆದುಕೊಳ್ಳಲು ಸಾಧ್ಯವಾಗಿಲ್ಲ ಆದರಿಂದ ಹೆಚ್ಚಿನ ಪಾಟೀ ಸವಾಲಿಗಾಗಿ ಮುಂದುಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಯಾದಗಿರಿ.